ಹಗ್ಗವನ್ನು ಕಟ್ಟುತ್ತೇನೆ. ನೀನು ಹಣ ಸಂಗ್ರಿಹಿಸಿ ಆದಮೇಲೆ ನನಗೆ ಸೂಚನೆ ಕೊಟ್ಟರೆ, ನಾನು ಮತ್ತೆ ನಿನ್ನನ್ನು ಮೇಲಕ್ಕೆ ಎಳೆದುಕೊಳ್ಳುವೆ' ಎಂದಳು ಮಾಯಾವಿನಿ.

ಅದಕ್ಕೆ ಸೈನಿಕ, 'ಅದು ಸರಿ, ನಾನು ಮರದ ಬುಡ ಸೇರಿದಾಗ ಏನೇನು ಮಾಡಬೇಕು' ಎಂದು ಕೇಳಿದನು. ಅದಕ್ಕೆ ಮಾಂತ್ರಿಕಳು 'ಏನು ಮಾಡಬೇಕೆಂದರೆ ಹಣ ಸಂಗ್ರಹಿಸಬೇಕು, ಮತ್ತಿನ್ನೇನು? ನೋಡು ಯೋಧ ನೀನು ಆ ಮರದ ತಳ ತಲುಪಿದಾಗ ಅಲ್ಲಿ ನೀನು ಒಂದು ವಿಶಾಲವಾದ ಅಂಗಣವನ್ನು ಕಾಣುವೆ ಅಲ್ಲಿ ವಿಪರೀತವಾದ ಬೆಳಕಿರುವುದು. ಏಕೆಂದರೆ ನೂರಕ್ಕೂ ಮಿಗಿಲಾದ ಹಣತೆಗಳು ಅಲ್ಲಿ ಬೆಳಗುತ್ತಿರುತ್ತವೆ. ಅದರ ಬೆಳಕಿನಲ್ಲಿ ನೀನು ಅಲ್ಲಿ ಮೂರು ಬಾಗಿಲುಗಳನ್ನು ಕಾಣುವೆ. ಪ್ರತಿ ಬಾಗಿಲಿಗೂ ಅದರಲ್ಲಿಯೇ ಒಂದೊಂದು ಕೀಲಿಗಳಿವೆ. ಅದರ ಸಹಾಯದಿಂದ ಪ್ರತಿಯೊಂದು ಬಾಗಿಲನ್ನೂ ತೆರೆಯಬಹುದು. ಆ ಬಾಗಿಲುಗಳನ್ನು ತೆರೆದರೆ, ಪ್ರತಿ ಬಾಗಿಲು ತೆರೆದಾಗ ಒಂದೊಂದು ಕೋಣೆಯನ್ನು ನೀನು ಪ್ರವೇಶಿಸುವೆ ಮತ್ತು ಪ್ರತಿ ಕೋಣೆಯ ನಡುವೆ ಒಂದೊಂದು ತಿಜೋರಿ ಇರುವುದನ್ನು ಕಾಣುವೆ.

ನೀನು ಪ್ರಥಮ ಕೋಣೆಯ ಬಾಗಿಲನ್ನು ತೆರೆದು ನೋಡಿದರೆ, ಆ ಕೋಣೆಯ ನಡುವೆ ಒಂದು ತಿಜೋರಿಯನ್ನು ಕಾಣುವೆ. ಆದರೆ ಆ ತಿಜೋರಿಯ ಮೇಲೆ ಒಂದು ನಾಯಿ ಕುಳಿತಿರುತ್ತದೆ. ಅದರ ಕಣ್ಣುಗಳು ಒಂದು ತಟ್ಟೆಯಷ್ಟು ಅಗಲವಿರುತ್ತದೆ. ಆದರೆ, ನೀನು ಚಿಂತಿಸಬೇಕಿಲ್ಲ, ಏಕೆಂದರೆ ನಾನು ನಿನಗೊಂದು ನೀಲಿ ಬಣ್ಣದ ಚೌಕಾಕಾರದ ಚಿತ್ರವಿರುವ ಒಂದು ಮೇಲಂಗಿಯನ್ನು ಕೊಡುವೆ. ನೀನು ನನ್ನ ಮೇಲಂಗಿಯನ್ನು ನೆಲದ ಮೇಲೆ ಹಾಸಿ ನಾಯಿಯನ್ನು ಎಳೆದು ಆ ನನ್ನ ಮೇಲಂಗಿ ಮೇಲೆ ಕೂಡ್ರಿಸು. ಅದು ಅದರ ಮೇಲೆ ತೆಪ್ಪಗೆ ಕುಳಿತುಕೊಳ್ಳುವುದು. ಆಗ ನೀನು ತಿಜೋರಿಯ ಬಾಗಿಲನ್ನು ತೆರೆಯಬಹುದು ಮತ್ತು ನಿನಗೆ ಬೇಕಾದಷ್ಟು ನಾಣ್ಯಗಳನ್ನು ತುಂಬಿಸಿಕೊಳ್ಳಬಹುದು. ಆದರೆ, ನೆನಪಿರಲಿ ಅವೆಲ್ಲವೂ ತಾಮ್ರದ ನಾಣ್ಯಗಳಾಗಿರುತ್ತವೆ.

ಆದರೆ, ನಿನಗೆ ಒಂದು ವೇಳೆ ಬೆಳ್ಳಿಯ ನಾಣ್ಯಗಳು ಇಷ್ಟವೆನಿಸಿದರೆ ಎರಡನೆಯ ಕೋಣೆಯ ಬಾಗಿಲನ್ನು ತೆರೆ. ಅಲ್ಲಿಯೂ ಒಂದು ತಿಜೋರಿ ಇದೆ. ಅದರ ಮೇಲೆ ಒಂದು ನಾಯಿ ಕುಳಿತಿರುತ್ತದೆ. ಅದರ ಕಣ್ಣುಗಳು ಒಂದು ಬೀಸು ಯಂತ್ರದ ಗಾಲಿಗಳಷ್ಟು ಅಗಲವಿರುವುದು. ಅದಕ್ಕೂ ನೀನು ಹೆದರಬೇಕಿಲ್ಲ. ನಾನು ಕೊಟ್ಟ ನನ್ನ ಮೇಲು ಹೊದಿಕೆಯನ್ನು ನೆಲದಮೇಲೆ ಹಾಸಿ ನಾಯಿಯನ್ನು ಅದರ ಮೇಲೆ ಎಳೆದು ಕೂಡ್ರಿಸಿ, ನಿನಗೆ ಬೇಕಾದಷ್ಟು ಬೆಳ್ಳಿಯ ನಾಣ್ಯಗಳನ್ನು ಸಂಗ್ರಹಿಸಿಕೊಳ್ಳಬಹುದು.

ಒಂದು ವೇಳೆ ನಿನಗೆ ಬೆಳ್ಳಿಯ ನಾಣ್ಯ ಇಷ್ಟವಾಗದೆ, ಬಂಗಾರದ ನಾಣ್ಯ ಇಷ್ಟವೆನಿಸಿದರೆ? ಹೌದಲ್ಲವೇ? ನಿನಗೆ ಸಹಜವಾಗಿ ಎಲ್ಲದಕ್ಕಿಂತಲೂ ಚಿನ್ನದ ನಾಣ್ಯ ಇಷ್ಟವೆನಿಸಲೇಬೇಕು. ಆಗ ನೀನು ಮೂರನೇ ಬಾಗಿಲನ್ನು ತೆರೆಯ ಬೇಕು. ಆಗ ಅಲ್ಲಿ ಆ ಮೂರನೇ ಕೋಣೆಯಲ್ಲಿ ಒಂದು ತಿಜೋರಿ ಇರುವುದನ್ನು ನೀನು ಕಾಣುವೆ. ಅದರ ಮೇಲೂ ಒಂದು ನಾಯಿ ಕುಳಿತಿರುತ್ತದೆ. ಅದರ ಕಣ್ಣುಗಳು ಕೋಪನ್ ಹೇಗನ್ ನಗರದ ಗೋಲ ಗೋಪುರದಷ್ಟು ದೊಡ್ಡದಿರುತ್ತವೆ. ಅಂತಹ ಭಯಂಕರವಾದ ನಾಯಿ ಅದು. ಆದರೆ, ಅದಕ್ಕೂ ನೀನೇನೂ ಭಯಪಡಬೇಕಾಗಿಲ್ಲ. ಅದರ ಕ್ರೂರ ದೃಷ್ಟಿಗೂ ಹೆದರಬೇಕಿಲ್ಲ ಅದನ್ನು ಎಳೆದು ನನ್ನ ಮೇಲಂಗಿಯ ಮೇಲೆ ಕೂಡ್ರಿಸು. ತೆಪ್ಪಗೆ ಕುಳಿತು ಕೊಳ್ಳುವುದು. ನಿನಗೇನೂ ಮಾಡುವುದಿಲ್ಲ. ನಿನಗೆ ಬೇಕಿದ್ದಷ್ಟು ಬಂಗಾರದ ನಾಣ್ಯಗಳನ್ನು ತಿಜೋರಿಯಿಂದ ತುಂಬಿಸಿಕೋ. ತಿಳಿಯಿತೇ?' ಎಂದಳು ಮಂತ್ರವಾದಿನಿ.